## ನೆಗೆಟಿವ್

ಗುಂಡ ಮತ್ತು ಅವನ ಮಗನಿಗೆ ಕೋವಿಡ್ ಪಾಸಿಟಿವ್ ಬಂದು ಆಸ್ಪತ್ರೆ ಸೇರಿದರು. ನಂತರ ಗುಂಡನ ಹೆಂಡತಿಯೂ ಪರೀಕ್ಷಿಸಿಕೊಂಡಳು. ಆಕೆಗೆ ನೆಗಟಿವ್ ಅಂತ ಬಂದಾಗ ಗುಂಡ ಹೇಳಿದ, 'ನಿನಗೆ ಖಂಡಿತ ನೆಗಟಿವ್ ಬರುತ್ತೆ ಅಂತ ನನಗೆ ಮೊದಲೇ ಗೊತ್ತಿತ್ತು ಕಣೆ'. 'ಅದು ಹೇಗೆ ಗೊತ್ತಿತ್ತು?' ಆಶ್ಚರ್ಯದಿಂದ ಕೇಳಿದಳು. ಅದಕ್ಕೆ ಗುಂಡ, 'ಇದು ನಿನಗೂ ಗೊತ್ತು, ಮನೆಯಲ್ಲಿ ಯಾವುದೇ ವಿಷಯ ಬಂದ್ರೂ ನಮ್ಮಿಬ್ಬರದು ಪಾಸಿಟಿವ್ ಆಗಿರುತ್ತೆ. ನಿನ್ನದು ಮಾತ್ರ ಯಾವಾಗಲೂ ನೆಗಟಿವ್ ತಾನೇ?' ಎಂದ.

**ಶಂಕರೇಗೌಡ ತುಂಬಕೆರೆ**





## ಹಲ್ಲಿನ ದರ

ಸುಂದರವಾದ ಯುವತಿ ದಂತವೈದ್ಯರ ಬಳಿಗೆ ಹೋದಳು. 'ಒಂದು ಹಲ್ಲನ್ನು ಕೀಳಲು ಎಷ್ಟು ದರ?' ಎಂದು ಕೇಳಿದಳು. 'ಐನೂರು ರೂಪಾಯಿ' ಎಂದರು ವೈದ್ಯರು. 'ಐನೂರು ರೂಪಾಯಿ! ಬಹಳ ದುಬಾರಿಯಾಯಿತು' ಎಂದಳು ಯುವತಿ. ಇಷ್ಟು ಸುಂದರ ಯುವತಿಯ ಸಾಮಿಪ್ಯ ಸಿಗುವಾಗ ಸ್ವಲ್ಪ ತ್ಯಾಗ ಮಾಡಲೇಬೇಕಲ್ಲವೆ? ಎಂದುಕೊಂಡ ವೈದ್ಯ, 'ದುಬಾರಿಯಾಯಿತೆ? ನಿಮಗಾಗಿ ಒಂದು ಹಲ್ಲು ಕೀಳಲು 50 ರೂಪಾಯಿ, ಅಷ್ಟೆ' ಎಂದ. 'ಧನ್ಯವಾದಗಳು' ಎಂದ ಯುವತಿ ಕಾರಿನಲ್ಲಿ ಕುಳಿತಿದ್ದ 70ರ ಅಜ್ಜಿಯನ್ನು ಕರೆತಂದು, 'ಇವರ ಬಾಯಿಯಲ್ಲಿರುವ ಎಲ್ಲಾ ಹುಳುಕು ಹಲ್ಲುಗಳನ್ನು ತೆಗೆದುಬಿಡಿ' ಎಂದಳು.

**ಪ. ರಾಮಕೃಷ್ಣಶಾಸ್ತ್ರೀ**